


ಅಮಿತಾಬ್ ಬಚ್ಚನ್

ಎಂದು ಅಪ್ಪ ಶಾಲೆಯಲ್ಲಿ ತಿಳಿಸಿ ಹೇಳಿ ಹೋದ ಮೇಲೆ ಉಪದ್ರ ಕಡಿಮೆ–ಯಾಗಿತ್ತು. ಆದರೂ ನಾ ಎಡಗೈಯ್ಯಲ್ಲಿ ಬರೆಯುವಾಗ ಗೆಳತಿಯರೆಲ್ಲ ವಿಚಿತ್ರ ಪ್ರಾಣಿ ಎಂಬಂತೆ ನೋಡುತ್ತಾ ಆಡಿಕೊಂಡು ನಗುವುದು ಅಳು ತರಿಸಿತ್ತು.

ಕೀಳರಿಮೆ ಕಾಡಿದ್ದರಿಂದ ಅಂತರ್ಮುಖಿಯಾದೆನೇನೋ ತಿಳಿಯದು. ಆದರೆ ಕಾಲಾನಂತರದಲ್ಲಿ ಅದೇ ಗೆಳತಿಯರು ನನ್ನ ಸ್ನೇಹಕ್ಕಾಗಿ ಹಾತೊರೆದದ್ದು ನನ್ನಲ್ಲಿರುವ ಚಿತ್ರಕಲೆಯ ನೈಪುಣ್ಯದಿಂದಾಗಿ. ಅವರ ಮನೆಗಳಿಗೆ ಕರೆದು–ಕೊಂಡು ಹೋಗಿ ಅವರವರ ಅಮ್ಮಂದಿರ ಮುಂದೆ ಚಿತ್ರ ಬಿಡಿಸಲು ಕೇಳಿಕೊಳ್ಳುತ್ತಿದ್ದರು. ಕೆಂಪು ನೆಲದ ಮೇಲೆ ಎಡಗೈಯಲ್ಲಿ ಚಾಕ್ ಪೀಸ್ ಹಿಡಿದು ಚಕಚಕನೆ ಚಿತ್ರ ಬಿಡಿಸುತ್ತಿದ್ದರೆ ಬೆರಗಿನಿಂದ ನೋಡುವ ಸರದಿ ಅವರದ್ದು.

## ಲೋಕರೂಢಿ

ನಾವಿರುವುದು ಬಲಗೈ ಪ್ರಾಬಲ್ಯದ ಜಗದಲ್ಲಿ. ಪ್ರಪಂಚದ ಒಟ್ಟೂ ಜನಸ್ತೋಮದಲ್ಲಿ ಶೇ.80ರಷ್ಟು ಜನಸಂಖ್ಯೆ 'ಬಲಚರು'. ಹಾಗಾಗಿ 'ಬಲ' ಸಹಜ, ಶ್ರೇಷ್ಠ, ಸರಿ, ಪವಿತ್ರ ಎನ್ನಿಸಿಕೊಂಡದ್ದು. ಇವರಲ್ಲಿ ಮಸ್ತಿಷ್ಕದ ಎಡಭಾಗ ಪ್ರಬಲವಾಗಿದ್ದು ದೇಹದ ಬಲಭಾಗವನ್ನು ನಿಯಂತ್ರಿಸುತ್ತದೆ. ಇವರ ಅನುಕೂಲಕ್ಕೆ ತಕ್ಕಂತೆ ವಾಚು, ಪೀಲರ್, ಬಾಗಿಲ ಹಿಡಿಕೆ, ಚಿಲಕ, ಫ್ರಿಡ್ಜ್ ಬಾಗಿಲು, ಸಂಗೀತ ಸಲಕರಣೆಗಳು, ಗಣಕಯಂತ್ರದ ಮೌಸ್, ಕೀ ಬೋರ್ಡ್‌ನ ಜೋಡಣೆ , ಶರ್ಟ್, ರವಿಕೆ ಉಡುಪುಗಳ ಬಟನ್‌ಗಳು, ಕತ್ತರಿ ಮುಂತಾದ ದಿನನಿತ್ಯದ ಸಲಕರಣೆಗಳು, ವ್ಯವಸ್ಥೆಗಳು ರೂಪುಗೊಂಡದ್ದು. ಕಷ್ಟವೋ ನಷ್ಟವೋ ಎಡಚರಾದ ನಾವು ಇದಕ್ಕೆ ಅಭ್ಯಾಸ ಪೂರ್ವಕವಾಗಿಯಾದರೂ ಹೊಂದಿಕೊಳ್ಳಲೇ ಬೇಕಾದ ಅನಿವಾರ್ಯತೆ.

ಎಡಚರಾಗಿ ಹುಟ್ಟುವುದೇ ಕೇಡು, ಅನಿಷ್ಟ ಎಂದು ತಿಳಿದಿದ್ದ ಕಾಲ–ವೊಂದಿತ್ತು. ಇಟಲಿಯಲ್ಲಿ ಎಡಚರೆಂದರೆ ಕಪಟಿಗಳು; ಲ್ಯಾಟಿನ್‌ನಲ್ಲಿ ಕೆಟ್ಟವರು; ಮೊರೊಕ್ಕೊದಲ್ಲಿ ಭೂತ ಅಥವಾ ಶಾಪಗ್ರಸ್ತರು; ಇಸ್ಲಾಮಿಕ್ ದೇಶದಲ್ಲಿ ಅಪವಿತ್ರರು; ಜರ್ಮನಿಯಲ್ಲಿ ಅವ್ಯವಸ್ಥೆಯವರು; ಹೀಬ್ರು ಹಾಗೂ ಪ್ರಾಚೀನ ಮೆಸೆಪಟೋಮಿಯ ನಾಗರಿಕತೆಯಲ್ಲಿ ದುರಾದೃಷ್ಟಕರ, ಶಾಪ–ಗ್ರಸ್ಥರು, ಮರ್ಯಾದೆಗೇಡಿಗಳು; ಆಂಗ್ಲರಲ್ಲಿ ದುಷ್ಟಶಕ್ತಿ ಅಥವಾ ಸೈತಾನರು ಎಂದೇ ತಿಳಿಯಲಾಗಿತ್ತು. ಸ್ಕಾಟ್ಲೆಂಡಿನಲ್ಲಿ ದುರಾದೃಷ್ಟ ವ್ಯಕ್ತಿಯನ್ನು 'he must have been baptized by a left handed priest !' ಎನ್ನಲಾಗುತ್ತಿತ್ತು. ಇನ್ನು ಎಡಗೈ ತುರಿಕೆಯಾದಲ್ಲಿ 'ಧನನಷ್ಟ' ಬಲಗೈ ತುರಿಕೆಯಾದಲ್ಲಿ 'ಧನಪ್ರಾಪ್ತಿ' ಎಂಬುದು ನಮ್ಮ ಮತ್ತು ಅನೇಕ ದೇಶಗಳ ಮೌಢ್ಯಗಳಲ್ಲಿ ಒಂದಾಗಿದೆ. ಆಂಗ್ಲರಲ್ಲಿ 'left handed compliment' ಎಂದರೆ ಅವಮಾನ ಎಂದೂ 'left handed honeymoon' ಎಂದರೆ ಮಿಸ್ಟ್ರೆಸ್ ಅಥವಾ ಇಟ್ಟುಕೊಂಡವಳ ಜೊತೆಗೆ ಹೋದದ್ದು ಎಂದರ್ಥವಂತೆ. ಆದರೆ ಉತ್ತರ ಅಮೆರಿಕಾದ ಝುನೀ ಆದಿವಾಸಿ ಜನಾಂಗದಲ್ಲಿ ಮಾತ್ರ ಎಡಚರೆಂದರೆ ಅದೃಷ್ಟವಂತರು. ಕೊಡುಕೊಳ್ಳುವಿಕೆ, ಮಂಗಲಕಾರ್ಯ, ಅಭಿನಂದಿಸುವುದು, ಬಡಿಸುವುದು– ಮುಂತಾದ ಕ್ರಿಯೆಗಳಿಗೆ ಬಲಗೈ ಬಳಸುವುದು ಶ್ರೇಷ್ಠ. ಹಾಗೆ ಮಾಡಿದರಷ್ಟೇ ಮನ್ನಣೆ. ಹಸ್ತಲಾಘವ, ಸೆಲ್ಯೂಟ್ ಹೊಡೆಯುವುದು ಕೂಡ. ವಿಶ್ವಾದ್ಯಂತ ಈ ಪ್ರಕ್ರಿಯೆ ಸರ್ವಸಮ್ಮತ. ಆದರೆ ವಾಮ ಬಳಕೆ ಅಪರಕರ್ಮ ಮತ್ತು ಶೌಚ ಕ್ರಿಯೆ–ಗಳಿಗಷ್ಟೇ ಸೀಮಿತ. 'ಎಡ' ಎಂಬ ಪದಕ್ಕೆ ಹೀನ, ಅಶುಭ, ದ್ವಿತೀಯ ದರ್ಜೆ, ದುರ್ಬಲ, ಕೆಡುಕು, ಅಪವಿತ್ರ ಮುಂತಾಗಿ ಸಮಾನಾರ್ಥಕಗಳು ಲೋಕರೂಢಿಯಲ್ಲಿ ಹುಟ್ಟಿಕೊಂಡಿವೆ.

ಬಲಗೈಯವರು ಮಗುವನ್ನು ಎತ್ತಿಕೊಳ್ಳಲು, ನೀರಿನ ಕೊಡ, ಸಾಮಾನು–ಗಳನ್ನು ಹೊರಲು ಎಡ ಸೊಂಟ ಅಥವಾ ಕಂಕುಳು, ಭುಜಗಳನ್ನು ಬಳಸುವುದು ವಾಡಿಕೆ. ಅದೇ ರೀತಿ ಎಡಚರಾದವರು ಬಲಭಾಗ ಬಳಸುವುದು ರೂಢಿ. ಇತ್ತೀಚೆಗೆ ಮನೆಯ ಸಮೀಪ ಪ್ರಾರಂಭವಾದ ಮಂಗಳವಾರದ ತರಕಾರಿ ಸಂತೆಗೆ ಹೋಗಿದ್ದೆ. ಎಡಚಳಾದ ನಾನು ಬಲಭುಜಕ್ಕೆ ಚೀಲಗಳನ್ನು ನೇತು ಹಾಕಿಕೊಂಡು ಬಲಗೈಯಲ್ಲಿ ಪರ್ಸ್ ಹಿಡಿದು ಮಂಡಿಯೂರಿ ಕುಳಿತು ಸಹಜ–